ಮುಕ್ತಿಗೆ ಆಗಸದ ಗಂಗೆಯನ್ನು 'ಇಳಿದುಬಾ ತಾಯಿ' ಎಂದು ಮರ್ತ್ಯಕ್ಕೆ ಕರೆತಂದನಷ್ಟೆ. ಜನ, ತಮಗೆ ನಿಲುಕದ ದೈವಿಕತೆಯನ್ನು ಮರ್ತ್ಯಕ್ಕೆ ಇಳಿಸಬೇಕೆಂಬ ಅಪೇಕ್ಷೆ ಅವತಾರದ ಕಥೆಗಳ ಹಿಂದಿರುವ ಸಾಧ್ಯತೆಯಿದೆ.

ಮಹಾತ್ಮರನ್ನು ಕುರಿತ ಸಿನಿಮಾಗಳಲ್ಲಿ, ವ್ಯೋಮದಿಂದ ಬೆಳಕಿನ ಕಿರಣವೊಂದು ಸ್ತ್ರೀಗರ್ಭ ಪ್ರವೇಶಿಸುವ ನಾಟಕೀಯ ದೃಶ್ಯವನ್ನು ಪ್ರೇಕ್ಷಕರೆಲ್ಲರೂ ಬಲ್ಲರು. ವಿಶೇಷವೆಂದರೆ, ಮುಗಿಲವಾಸಿಗಳು ನೆಲಕ್ಕಿಳಿವ ಕಥೆಗಳಲ್ಲಿ ಪ್ರಾಪಂಚಿಕರ ಉದ್ಧಾರ ಮಾತ್ರ ಇರುವುದಿಲ್ಲ. ಅವರು ದೇವಲೋಕದಲ್ಲಿ ಮಾಡಿದ ತಪ್ಪಿನ ಪ್ರಾಯಶ್ಚಿತ್ತವೂ ಇರುತ್ತದೆ. ಹರಿಹರನ ರಗಳೆಗಳ ಬಹುತೇಕ ನಾಯಕರು, ಕೈಲಾಸದಲ್ಲಿ ತಪ್ಪುಮಾಡಿ ಬಂದ ಶಾಪಗ್ರಸ್ತರು; ಶಾಪ ಪರಿಹಾರವಾದ ಬಳಿಕ ಮೇಲಕ್ಕೆ ಜಿಗಿಯುವವರು. ಹಾಗಾದರೆ ಭೂಮಿಯು ದೇವಲೋಕದ ತಪ್ಪಿತಸ್ಥರನ್ನು ಸರಿಪಡಿಸುವ ತಾಣವೇ? ಕೆಲವೊಮ್ಮೆ ಶಿಕ್ಷಾವಧಿಯನ್ನು ಯಶಸ್ವಿಯಾಗಿ ಪೂರೈಸಿದವರನ್ನು ಕರೆದೊಯ್ಯಲು ದೇವಲೋಕದಿಂದ ವಿಮಾನಗಳೂ ಆಗಮಿಸುವುದುಂಟು. ನಮ್ಮ ವೀರಗಲ್ಲುಗಳಲ್ಲೂ ಯುದ್ಧದಲ್ಲಿ ಮಡಿದ ವೀರನನ್ನು ರೆಕ್ಕೆಯುಳ್ಳ ದೇವತೆಯರು ವಿಮಾನದಲ್ಲಿ ಕೈಲಾಸಕ್ಕೆ ಕರೆದೊಯ್ಯುವ ಕೆತ್ತನೆಗಳನ್ನು ಗುರುತಿಸಬಹುದು. ಶವವಾಹನಕ್ಕೆ ವಿಮಾನವೆಂಬ ಪರ್ಯಾಯ ಹೆಸರೂ ಇರುವುದು ಮಾರ್ಮಿಕ.

ಧರಣಿಮಂಡಲದ ಮೇಲೆ ಬಾಳಿಬದುಕಿದ ನರಮನುಷ್ಯರ ದೇಹವು ಇಲ್ಲೇ ವಿಲೇವಾರಿಯಾದರೂ, ಜೀವಾತ್ಮಗಳು ಮುಗಿಲಿಗೇರಿ ತಾರೆಗಳಾಗುವ ಕಲ್ಪನೆ ವಿಶೇಷವಾಗಿದೆ. 'ಚಿರಸ್ಮರಣೆ' ಕಾದಂಬರಿಯಲ್ಲಿ ಗಲ್ಲಿಗೇರಿದ ವೀರರ ಮಡದಿಯರು, ಮಕ್ಕಳಿಗೆ 'ಅಗೋ ನೋಡು, ನಿಮ್ಮಪ್ಪ' ಎಂದು ನಕ್ಷತ್ರಗಳನ್ನು ತೋರಿಸುವ ಪ್ರಸಂಗವುಂಟು. ಭೂಮಿ ಮೇಲಾದ ಅಪಮಾನಕ್ಕೆ ನೊಂದು ರಾಜಕುಮಾರ ಧ್ರುವನು ನಕ್ಷತ್ರನಾದ ಕಥೆ ಪ್ರಸಿದ್ಧವಾಗಿದೆ. ಇಂಥ ಕಥೆಗಳಲ್ಲಿ ಮೇಲೇರಿ ನಕ್ಷತ್ರಗಳಾದವರು ಮರ್ತ್ಯದವರಿಗೆ ಮಿಣುಕು ಬೆಳಕನ್ನು ಹಾಯಿಸಬಹುದು; ತಾರಾಮಂಡಲ ರೂಪದಲ್ಲಿ ರಾತ್ರಿಯಲ್ಲಿ ಹಾದಿ ತೋರುವ ಕೈಮರಗಳಾಗಬಹುದು. ಆದರೆ, ಇದೆಲ್ಲವೂ ಬಿಟ್ಟುಹೋದ ಭೂಮಿಯೊಂದಿಗೆ ಅವರ ಕಡಿದುಕೊಳ್ಳಲಾರದ ಸೆಳೆತದ ಭಾಗವೇ ಆಗಿದೆ. ದೇವಲೋಕ ಭೂಲೋಕಗಳ ನಡುವೆ ಚಾಡಿ ಹಚ್ಚುತ್ತ, ತಂಬೂರಿ ಬಾರಿಸುತ್ತ ಮೋಡಗಳ ಮೇಲೆ ತೇಲುತ್ತ ಬರುವ ನಾರದನ ಪಾತ್ರವನ್ನು ಸೃಷ್ಟಿಸಿಕೊಂಡಿರುವುದೂ ಇಂಥ ಸೆಳತವೇ. ಸಾವಿಲ್ಲದ, ಬೇನೆಯಿಲ್ಲದ, ನೋವಿಲ್ಲದ, ದೇವಲೋಕದ ಬಾಳು ಬಹುಶಃ ಬೇಸರ ಹುಟ್ಟಿಸುತ್ತದೆ. ನೆಲದ ವರ್ಣರಂಜಿತ ಅನುಭವದ ರುಚಿಗಾಗಿ ದೇವತೆಗಳು ಮುಗಿಲ ಅಟ್ಟದಿಂದ ಕೆಳಗಿಳಿವುದು ಅನಿವಾರ್ಯ. ಗ್ರೀಕ್ ದೇವತೆಗಳಂತೂ ಒಲಂಪಸ್ ಬೆಟ್ಟದಲ್ಲಿ ಇದ್ದದ್ದೇ ಕಮ್ಮಿ. ವೇಷ ಮರೆಸಿಕೊಂಡು ತಿರೆಗಿಳಿಯಲು ಅವರಿಗೆ ನೂರಾರು ನೆವ. ದೇವಲೋಕದ ಅಧಿಪತಿ ಝ್ಯೂಸನು, ಲೀಡಾ ಎಂಬ ಭುವನಸುಂದರಿಯನ್ನು ಕಾಮಿಸಲು ಹಂಸರೂಪಿಯಾಗಿ ಆಗಮಿಸಿದ್ದುಂಟು. ನಮ್ಮ ಸುರಪತಿ ಇಂದ್ರ ವೇಷಮರೆಸಿ ಎಷ್ಟು ಸಲ ಪೃಥಿವಿಯ ಗುರುತ್ವಾಕರ್ಷಣೆಗೆ ಜಾರಿಲ್ಲ? 'ಇರುವುದನ್ನು ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ' ಎಂಬ ತತ್ವವನ್ನು, ಭೂವಾಸಿಗಳಿಗಿಂತ ಮುಗಿಲೂರಿನವರೇ ಹೆಚ್ಚು ಪಾಲಿಸಿದಂತಿದೆ.

ವಿಮಾನವೇರಿದಾಗೆಲ್ಲ ನನ್ನ ಕಣ್ಣು ಅಯತ್ನವಾಗಿ ಭೂಮಂಡಲದತ್ತ ತಿರುಗುತ್ತವೆ. ಭೂಮಿಯ ಮೇಲೆ ಜಲದ ಬಳ್ಳಿಯಂತೆ ಶಾಖೋಪಶಾಖೆ ಹರಿವ ನದಿಗಳ ಜಲನಕಾಶೆ ದಿಟ್ಟಿಸುತ್ತೇನೆ. ಜರ್ಮನಿಯ ಹಾರಾಟದಲ್ಲಿ ನಾವು ಕಂಡ ರೈನ್, ದೋಣಿ ಸೇತುವೆ ದಡದೂರುಗಳ ಸಮೇತ ಕಲಾವಿದ ರಚಿಸಿದ ಅದ್ಭುತ ವರ್ಣಚಿತ್ರ; ಅದರುದ್ದಕ್ಕೂ ದೋಣಿಯಲ್ಲಿ ಪಯಣಿಸಬೇಕು ಎಂಬಾಸೆ ಹುಟ್ಟಿಸುವಷ್ಟು ಮೋಹಕ. ಇಂತಹ ವ್ಯಾಮೋಹ ಹುಟ್ಟಿಸುವ ಇತರ ಹೊಳೆಗಳೆಂದರೆ, ನೈಲ್ ಮತ್ತು ಗಂಗೆ. ಮರುಭೂಮಿಯಲ್ಲಿ ಹರಿವ ನೀಲನೈಲಿನಲ್ಲಿ, ಅದು ಈಜಿಪ್ಟ್ ಪ್ರವೇಶಿಸುವಲ್ಲಿಂದ ತೊಡಗಿ ಕಡಲು ಸೇರುವ ತನಕ ಕರೆದೊಯ್ಯುವ ನಾವೆಗಳಿವೆ. ಬಂಗಾಳಕೊಲ್ಲಿಯ ಮುಖಜ ಭೂಮಿಯಲ್ಲಿರುವ ಸುಂದರಬನದಲ್ಲಿ ಗಂಗೆ, ಜಲಜಟೆಗಳನ್ನು ಹರವಿಕೊಂಡು ಸಹಸ್ರ ಸೀಳುಗಳಲ್ಲಿ ಕಡಲನ್ನು ಪ್ರವೇಶಿಸುವಳು. ಸಾಯುವುದರೊಳಗೆ, ಸುಂದರಬನದಲ್ಲಿ ದೋಣಿವಿಹಾರ ಮಾಡುತ್ತ ಮ್ಯಾಂಗ್ರೋವ್ ಕಾಡು ಮತ್ತು ಹುಲಿಗಳನ್ನು ಕಾಣಬೇಕು; ಈ ಹುಲಿ, ನೀರು, ಕಾಡುಗಳ ನಡುವೆ ಬಾಳುತ್ತಿರುವ ಧೀಮಂತರ ಜತೆ ಮಾತುಕತೆ